ದಿನಾಂಕ **07.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 4 ನೇ ಎದುರುದಾರರ ಪರ ವಕೀಲರಾದ ಶ್ರೀ ಎ.ಬಿ ರವರಿಂದಃ-**

ಅಪಘಾತದ ಸಂದರ್ಭದಲ್ಲಿ ನನ್ನ ಮಗ ಕಾರನ್ನು ಚಲಾಯಿಸುತ್ತಿದ್ದನು. ನನ್ನ ಮಗ ರಸ್ತೆಯ ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿದ್ದ ಜೆ.ಸಿ.ಬಿ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿ. ನಾನು ನಿ.ಪಿ **2** ರಂತೆ ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ಪೋಲೀಸರು ತನಿಖೆಯನ್ನು ಪೂರ್ಣಗೊಳಿಸಿ, ದೋಷಾರೋಪಣೆ ಪಟ್ಟಿಯನ್ನು(Abated charge sheet) ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಮಗನಿಗೆ ವಾರ್ಷಿಕ ರೂ. **40,000/-** ಆದಾಯ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಮರಣೋತ್ತರ ಪರೀಕ್ಷಾ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮಗ ಮೃತನಾದ ಬಳಿಕ, ಅಂತ್ಯಕ್ರಿಯೆ ಮತ್ತು ಇತರೆ ಕಾರ್ಯಗಳಿಗೆ ರೂ. **2,00,000/-** ಹಣ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಾರಿನ ನೋಂದಣಿ ಪ್ರಮಾಣಪತ್ರ **2** ನೇ ಎದುರುದಾರರ ಹೆಸರಿನಲ್ಲಿ ಇದ್ದು, **3** ನೇ ಎದುರುದಾರರ ಕಂಪನಿಯ ವಿಮೆಗೆ ಒಳಪಟ್ಟಿತ್ತು ಎಂದರೆ ಸರಿ. **4** ನೇ ಎದುರುದಾರು ಅನವಶ್ಯಕ

ಪಕ್ಷಗಾರರಾಗಿದ್ದು**,** ನಾನು ಕೇಳಿರುವ ಪರಿಹಾರವನ್ನು ನೀಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ**. 1** ನೇ ಎದುರುದಾರರ ವಿರುದ್ಧ ಪೋಲೀಸರು ಪ್ರಕರಣ ದಾಖಲಿಸಿರುವುದ್ದಿಲ ಎಂದರೆ ನನಗೆ ಗೊತ್ತಿಲ್ಲ**.**

2 ಮತ್ತು 3 ನೇ ಎದುರುದಾರರ ಪರ ವಕೀಲರು ಗೈರ ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.